ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಮಾಯಸಂದ್ರ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **25.03.2014**

ಈ ವಾರದ ಮುನ್ಸೂಚನೆ (ದಿನಾಂಕ **26-03-14 to 30.03.14** ವರೆಗೆ)

ನಿಯತಾಂಕಗಳು	26.03.14	27.03.14	28.03.14	29.03.14	30.03.14
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	37	36	35	36	37
ಕನಿಷ್ಠ ಉಷ್ಣಾಂಶ (ಡಿ.ಸೆ.)	21	22	21	22	21
ಮೋಡ (ಪ್ರಮಾಣ)	2	4	4	4	3
ಅರ್ದ್ರತೆ ೭.೨೦ ಬೆ (ಶೇ)	62	64	65	66	67
ಅರ್ದ್ರತೆ ೨.೨೦ ಮ (ಶೇ)	24	22	23	25	26
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	5	5	5	5
ಗಾಳಿಯ ದಿಕ್ಕು (ಡಿಗ್ರಿ)	130	140	120	120	110

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ತುಮಕೂರು ಹಾಗೂ ಸುತ್ತಮುತ್ತ ಒಣಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶ **35.0-37.0°C** ಮತ್ತು ಕನಿಷ್ಠ **21.0-22.0 °C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **62-67 %** ಇದ್ದು, ಮಧ್ಯಾಹ್ನ **22-26 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-5** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ದನಕರುಗಳಿಗೆ ಕಾಲುಬಾಯಿಜ್ವರ ರೋಗದ ಭೀತಿ ಇರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.
- ದಿನೇ ದಿನೇ ಬಿಸಿಲಿನ ಝಳ ಹೆಚ್ಚಾಗುತ್ತಿರುವುದರಿಂದ ತರಕಾರಿ ಬೆಳೆಗಳಿಗೆ ಹೆಚ್ಚಿನ ನೀರನ್ನು ಪೂರೈಸಬೇಕು. ರಸ ಹೀರುವ ಕೀಟಗಳ ಹಾವಳಿ ಜಾಸ್ತಿ ಇರುವುದರಿಂದ 5% ಬೇವಿನ ಕಷಾಯ ಅಥವಾ ಇಮಿಡಾಕ್ಲೋಪ್ರಿಡ್ ಸಿಂಪಡಿಸಿ.

ಚೆಂಡು ಹೂ: ಕೆಲವು ಕಡೆ ಪೋಷಕಾಂಶಗಳ ಕೊರತೆಯಿಚಿದ ಎಲೆಗಳು ಕಂದು ಅಥವಾ ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ-೨೦ ಸಿಂಪಡಿಸಬೇಕು ಅಥವಾ ಭೂಮಿಶಕ್ತಿ ಅಥವಾ ಮಹಾಫ್ಲೀಡ್ ಅನ್ನು ಹನಿ ನೀರಾವರಿ ಮೂಲಕ ಕೊಡಬೇಕು.

ಮಾರ್ಚ್ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ರಾಗಿ: ಇಂಡಾಫ್ಲ್-೯, **ಅಲಸಂದೆ:** ಸಿ-152. **ಉದ್ದು:** ಕರೆಗಾಂವ್-೩, ಟಿ-9, ರಶ್ಮಿ. **ಶಕ್ತಿಮಾನ್ ಮುಸುಕಿನ ಜೋಳ:** ಸಿ.ಎಸ್.ಹೆಚ್-೫, ಸಿ.ಎಸ್.ಹೆಚ್-೯. **ಅವರೆ:** ಹೆಚ್,ಎ.-೩, ಹೆಚ್,ಎ.-೪. **ತೋಟಗಾರಿಕೆ ಬೆಳೆಗಳು:** ಬಾಳೆ, ಬೆಂಡೆ, ತಿಂಗಳ ಅವರೆ.

ತರಕಾರಿ ಬೆಳೆಗಳಲ್ಲಿ ಕಂದುಬರುವ ಬೂಜು ರೋಗ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಕಂಡುಬರುವ ಕೊನೆ ಅಂಗಮಾರಿ ರೋಗಗಳ ನುಯಂತ್ರಣಕ್ಕೆ ರಿಡೊಮಿಲ್/**Ridomil**+ಮ್ಯಾಂಕೊಜೆಬ್ (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

- **ಕ್ಯಾಪ್ಸಿಕಂ:** ಬೂದಿ ರೋಗಕ್ಕೆ ನೇಟಿವೋ ಅನ್ನು ಸಿಂಪಡಿಸಿ.
- ತರಕಾರಿ ಬೆಳೆಗಳಲ್ಲಿ ಲೀಫ್ಫ್ ಮೈನರ್ ಹುಳು ಹೆಚ್ಚಾಗಿದ್ದರೆ ಅಬಾಮೆಕ್ಟಿನ್ (3 ಮಿ.ಲೀ/ಪ್ರತಿ 10 ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.
- **ಬೂದಿ ರೋಗ** ಇರುವ ಕಡೆ ಸಲ್ಫೆಕ್ಸ್ (ಗಂಧಕ) ಅನ್ನು ಸಿಂಪಡಿಸಲು ಸೂಚಿಸಲಾಗಿದೆ. ಮಳೆ ಅಥವಾ ಮೋಡ ಕವಿದ ವಾತಾವರಣವಿದ್ದಲ್ಲಿ ಸಿಂಪಡಣೆ ಮಾಡಬೇಡಿ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು